ನಿಯಮ 334ರ ಮೇರೆಗೆ

(i) ಪ್ರೀಮಿಯರ್ ಸ್ಟುಡಿಯೋವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಚಿತ್ರ ತಯಾರು ಮಾಡುವ ಬಗ್ಗೆ.

ಶ್ರೀ ಪಿ. ರಾಂದೇವ್.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಕನ್ನಡಕ್ಕೆ ಕುತ್ತು ಬರತಕ್ಕದ್ದು ನೋಡುತ್ತಿದ್ದೇವೆ. ದೊಡ್ಡ ಪತ್ರಿಕೆ, ಸಂಯುಂಕ್ತ ಕರ್ನಾಟಕ ಏನಾಯಿತು ? ಸರ್ಕಾರ ಅವರಿಗೆ ಯಾವ ರೀತಿ ಬೆಂಬಲ ಕೊಟ್ಟಿದೆ ನೋಡುತ್ತಿದ್ದೇವೆ. ಇಪ್ಪೊತ್ತು ಬಹಳ ಹಳೆಯ ಪ್ರೀಮಿಯರ್ ಸ್ಟುಡಿಯೋ ಮುಚ್ಚಿ ಬಹಳ ತಿಂಗಳು ಆಯಿತು. ಕರ್ನಾಟಕದಲ್ಲಿರತಕ್ಕ ಸ್ಟುಡಿಯೋ ಕಡಿಮೆ. ಇದು ಬಹಳ ದೊಡ್ಡ ಸ್ಟುಡಿಯೋ, ಖಾಸಗಿ ವಲಯದಲ್ಲಿರತಕ್ಕ ಸ್ಟುಡಿಯೋ ಈ ಸ್ಟುಡಿಯೋದಲ್ಲಿ ಚಿತ್ರೀಕರಣ ಮಾಡಲಿಕ್ಕೆ ಆಗುತ್ತಿಲ್ಲ. ೧೫ನೇ ತಾರೀಖು ಸ್ಟುಡಿಯೋ ಮುಂದೆ ಕಲಾವಿದರು ಪ್ರದರ್ಶನ ಮಾಡಿದ್ದಾರೆ. ಆಮರಣ ಉಪವಾಸ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಈ ಚಿತ್ರೀಕರಣಕ್ಕೆ ಸ್ಟುಡಿಯೋ ಬೇಕೇ ಬೇಕಾಗುತ್ತದೆ. ಈಗ ಇದು ಗೋಡನ್ ಆಗಿದೆ. ನಾನಾ ರೀತಿಯಲ್ಲಿ ಬಾಡಿಗೆಗೆ ಕೊಟ್ಟಿದ್ದಾರೆ ಆ ಬಗ್ಗೆ ಅವರು ಮಾನ್ಯ ಮುಖ್ಯಮಂತ್ರಿಗಳಿಗೂ ಒಂದು ಕಾಗದವನ್ನು ಬರೆದಿದ್ದಾರೆ. ೧೯೭೬ರಲ್ಲಿ ಸಾವಿರಾರು ಕಾಲ್‌ಶೀಟ್‌ಗಳು ಬರುತ್ತಿದ್ದು ೧೯೮೦ರಲ್ಲಿ ೨೫೦ ಕಾಲ್‌ಶೀಟ್‌ಗಳು ಬಂದಿದ್ದರಿಂದ ಕಷ್ಟ ಉಂಟಾಗಿ ಕಟ್ಟಡ ಬಾಡಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ.

೧೦.೦೦ ಎ.ಎಂ.

ಸ್ವಾಮಿ. ಈ ಸರ್ಕಾರ ಕನ್ನಡಕ್ಕೆ ಪ್ರೋತ್ಸಾಹವನ್ನು ಕೊಡತಕ್ಕ ಸರ್ಕಾರ. ಆದ್ದರಿಂದ ನಾನಾದರೂ ಒತ್ತಾಯ ಮಾಡುವುದು ಏನೆಂದರೆ, ಈ ಸ್ಟುಡಿಯೋವನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. ಆ ಮಾಲೀಕರು ಏನು ಹೇಳುತ್ತಿದ್ದಾರೆಂದರೆ ನಮಗೆ ನಷ್ಟವಾಗಿರುವುದರಿಂದ ಈ ಸ್ಟುಡಿಯೋವನ್ನು ಚಿತ್ರೀಕರಣಕ್ಕೆ ಕೊಡುವುದಿಲ್ಲ, ಅಲ್ಲದೆ ನಮ್ಮ ಈ ಸರ್ಕಾರದಿಂದ ನಮಗೆ ಯಾವುದೇ ಸಹಾಯವೂ ಬಂದಿಲ್ಲವೆಂದು ಹೇಳುತ್ತಿದ್ದಾರೆ, ಈ ಸ್ಟುಡಿಯೋ ನಮಗೆ ಚಿತ್ರೀಕರಣಕ್ಕೆ ಬೇಕೆಂದು ಅಲ್ಲಿನ ಕಲಾವಿದರು ಪಟ್ಟು ಹಿಡಿದು ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಗಮನಹರಿಸಿ ಈ ಸ್ಟುಡಿಯೋವನ್ನು ತಾವೇ ವಹಿಸಿಕೊಂಡು ಅಲ್ಲಿ ನಮ್ಮ ಕನ್ನಡ ಚಿತ್ರಗಳ ಚಿತ್ರೀಕರಣಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ,

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ವಿಚಾರವನ್ನು ಈಗ ತಾನೆ ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿರುವುದು ಒಳ್ಳೆಯದಲ್ಲಹೆಂದು ನಾನು ಹೇಳುವುದಿಲ್ಲ. ಆದರೆ ಇದರ ಬಗ್ಗೆ ವರದಿಯನ್ನು ತರಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ಇದು ಮಾಮೂಲಿ ಉತ್ತರವಾಗುತ್ತದೆ. ಸ್ವಾಮಿ, ಈ ಸ್ಟುಡಿಯೋ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿ ಕೂಡ ರಚನೆಯಾಗಿದೆ ಈಗಿನ ಪರಿಸ್ಥಿತಿ ವಿಕೋಪಕ್ಕೆ ಹೋಗಿ ತೊಂದರೆಯಾಗುವುದಕ್ಕೆ ಅವಕಾಶವನ್ನು ಕೊಡಬೆ ಇದರ ಬಗ್ಗೆ ಏನಂ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಿ. ನಾನು ಏತಕ್ಕೆ ಹೇಳಂತ್ತಿದ್ದೇನೆಂದರೆ ಅಲ್ಲಿಯ ಕಲಾವಿದರೆಲ್ಲಾ ಬೀದಿಗೆ ಇಳಿದು ಬಂದಿದ್ದಾರೆ. ನಮ್ಮದು ಕನ್ನಡಕ್ಕೆ ಪ್ರೋತ್ಸಾಹ ಕೊಡತಕ್ಕ ಸರ್ಕಾರ.—

ಅಧ್ಯಕ್ಷರು.—ಅವರು ಬೀದಿಗೆ ಬಂದಿದ್ದಾರೆ. ಆದರೆ ಈ ಪ್ರಸ್ತಾವ ಸರ್ಕಾರಕ್ಕೆ ಈಗ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈ ಪ್ರೀಮಿಯರ್ ಸ್ಟುಡಿಯೋ ವಾಗಿದ್ದುದೂ ಸ್ಟುಡಿಯೋ ಹಿಂದೆ ಒಂದು ರೀತಿಯಲ್ಲಿ ಸುಸಜ್ಜಿತವಾದ ಗೊತ್ತು ಮತ್ತು ಇದು ಸಾಕಷ್ಟು ಲಾಭವನ್ನು ಗಳಿಸಿದ್ದುದೂ ನನಗೆ ಗೊತ್ತಿದೆ. ಇದು ಖಾಸಗೀ ಸ್ಟುಡಿಯೋ. ಇಂಥ ಖಾಸಗೀ ಉದ್ದಿಮೆಯನ್ನು ನೀವು ನಡೆಸಲೇಬೇಕೆಂದು ನಾವು ಆ ಸ್ಟುಡಿಯೋದ ಮಾಲೀಕರನ್ನು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ. ಅದಲ್ಲದೆ ಇದು ಇಂಡಸ್ಟ್ರಿಯಲ್ ಆಕ್ಟ್ ಕೆಳಗೆ ಕೂಡ ಬರುವುದಿಲ್ಲ. ಅವರು ಅದನ್ನು ನಡೆಸದಿದ್ದರೆ ನಾವು ಯಾವ ರೀತಿ ಅವರ ಮೇಲೆ

ಒತ್ತಾಯ ಮಾಡಬೇಕೆಂಬುದೂ ಗೊತ್ತಾಗ ವುದಿಲ್ಲ. ಆಲ್ಲಿ ಕೆಲಸ ಮಾಡತಕ್ಕ ಕಲಾವಿದರು ಯಾರಿದ್ದಾರೆ ಅವರು ಬೆಂಗಳೂರಿನಲ್ಲಿರತಕ್ಕ ಸ್ಟುಡಿಯೋಕ್ಕೆ ಬೇಕಾದರೂ ಬಂದು ಕೆಲಸ ಮಾಡಬಹುದು. ಏಕೆಂದರೆ ಇಲ್ಲೂ ಒಂದು ಸ್ಟುಡಿಯೋ ಇದೆ. ಇಷ್ಟೇ ಅಲ್ಲದೆ ನಾವು ಹೆಸರಘಟ್ಟದಲ್ಲಿ ಕೂಡ ಒಂದು ಪ್ರತ್ಯೇಕವಾದ ಸಿನಿಮಾ ಊರನ್ನು ನಿರ್ಮಾಣ ಮಾಡಬೇಕೆಂದು ಮಾಡಿದ್ದೇವೆ. ಅಲ್ಲಿ ಹೊಸದಾಗಿ ಯಾರಾದರೂ ಸ್ಟುಡಿಯೋವನ್ನು ನಿರ್ಮಾಣ ಮಾಡುವವರು ಬಂದು ನಿರ್ಮಾಣ ಮಾಡಬಹುದು. ಅದಕ್ಕೆ ಬೇಕಾದ ಸೌಲಭ್ಯಗಳನ್ನು ನಾವು ಒದಗಿಸಿಕೊಡುತ್ತೇವೆ. ಈಗ ಈಪ್ರಿವೀಯರ್ ಸ್ಟುಡಿಯೋ ವಿಚಾರದಲ್ಲಿ ಕಾಯಿದೆ ಪ್ರಕಾರ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೋ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

(li) ಬೆಳಗಾಂನಲ್ಲಿ ಮರಾಠಿಯಲ್ಲಿ ಪತ್ರವ್ಯವಹಾರ ಮಾಡುವ ಬಗ್ಗೆ

ಶ್ರೀ ಕೆ.ಜಿ. ಮಹೇಶ್ವರಪ್ಪ (ಮಾಯಕೊಂಡ).—ಮಾನ್ಯ ಅಧ್ಯಕ್ಷರೆ, ಬೆಳಗಾಂನ ಜಿಲ್ಲಾಧಿಕಾರಿ ಯವರು ಒಂದು ಸುತ್ತೋಲೆಯನ್ನು ಹೊರಡಿಸಿ ಇನ್ನು ಮುಂದೆ ಸರ್ಕಾರದ ಕಚೇರಿಗಳಲ್ಲಿ ಮರಾಠಿ ಯಲ್ಲೇ ಪತ್ರವ್ಯವಹಾರಗಳನ್ನು ಮಾಡಬೇಕೆಂದು ತಿಳಿಸಿದ್ದಾರೆ. ನಮ್ಮ ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೊದಲನೇ ತಿಂಗಳಲ್ಲೇ ಗ್ರಾಮಾಂತರ ಪ್ರದೇಶದ ಜನರಿಗೆ ಅರ್ಥವಾಗುವಂತೆ ಇರಲು ಸರ್ಕಾರದ ಎಲ್ಲ ವ್ಯವಹಾರಗಳನ್ನೂ ಕನ್ನಡದಲ್ಲೇ ಮಾಡಬೇಕು, ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂದು ಆಜ್ಞೆಯನ್ನು ಮಾಡಿದೆ. ಆದರೆ ಈರೀತಿ ಆಜ್ಞೆ ಮಾಡುವಾಗ ಈ ''ಬೆಳಗಾಂನ್ನು ಹೊರತುಪಡಿಸಿ', ಎಂದು ಏನಾದರೂ ಆ ಸರ್ಕಾರೀ ಆಜ್ಞೆಯನ್ನು ಮಾಡಿದ್ದೀರಾ ? ದಯವಿಟ್ಟು ತಿಳಿಸಬೇಕು.

ಶ್ರೀ ವಿ. ಎಲ್. ಪಾಟೀಲ್.—ಸರ್ಕಾರೀ ಕಚೇರಿಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸ ಬೇಕೆಂದು ಸರ್ಕಾರೀ ಆಜ್ಞೆಯನ್ನು ನಾವು ಕಳುಹಿಸಿದ್ದೇವೆಯೇ ಹೊರತು, ನೀವು ಮರಾಠಿಯಲ್ಲಿ ವ್ಯವಹಾರ ಮಾಡಬಹುದು ಎಂದು ನಾವು ಏನೂ ಆಜ್ಞೆಯನ್ನು ಕಳುಹಿಸಿಲ್ಲ. ನಾವು ಕನ್ನಡದಲ್ಲಿ ಆ ಸುತ್ತೋಲೆಯನ್ನು ಕಳುಹಿಸಿದ್ದೇವೆ. ಆದರೆ ಪತ್ರಿಕೆಯಲ್ಲಿ ಬಂದಿರುವುದು ತಪ್ಪು ಎಂದು ಹೇಳ ಬಯಸುತ್ತೇನೆ.

ಡಾ॥ ವಿ. ಎಸ್. ಆಚಾರ್ಯ.—ಸ್ವಾಮಿ, ಫೋಟೋಸ್ಟ್ಯಾಟ್ ಕಾಪಿಯನ್ನು ನಾವು ನೋಡಿ ದ್ದೇವೆ. ಅದು ಬೆಳಗಾಂನ ಜಿಲ್ಲಾಧಿಕಾರಿಯವರು ಹೊರಡಿಸಿರುವಂಥಾದ್ದು.

ಒಬ್ಬ ಮಾನ್ಯ ಸದಸ್ಯರು.—ಪತ್ರಿಕೆಯಲ್ಲಿ ಬಂದಿರುವುದು ತಪ್ಪು ಎಂದು ಹೇಳುವುದಾದರೆ, ಜಿಲ್ಲಾಧಿಕಾರಿಯವರು ಆರೀತಿ ಸುತ್ತೋಲೆಯನ್ನು ಕಳುಹಿಸಿರುವುದು ನಿಜವೇ ಆದರೆ ಅವರ ಮೇಲೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಆ ಸಂದ್ರಿ ನನಗೆ ಬಂದಮೇಲೆ ನಾನು ಬೆಳಗಾಂನ ಜಿಲ್ಲಾಧಿಕಾರಿ ಯವರೊಡನೆ ಇದರ ಬಗ್ಗೆ ಮಾತನಾಡಿದ್ದೇನೆ. ತಾವು ಹೇಳುವ ರೀತಿ ಏನೂ ಇಲ್ಲ.

ಡಾ. ಆರ್. ಎನ್. —ನಾಯಕ್. —ಸ್ವಾಮಿ, ಭಟ್ಕಳ ತಾಲೂಕಿನ ಒಂದು ಊರಿನಲ್ಲಿ ಸರ್ಕಾರೀ ಉರ್ದು ಶಾಲೆ ಇದೆ. ತಾರೀಖು ೬ ೨-೧೯೮೪ರಲ್ಲಿ ಅಲ್ಲಿಯ ಸಹಾಯಕ ಶಿಕ್ಷಣ ಅಧಿಕಾರಿಗಳು ಆ ಶಾಲೆಗೆ ತಪಾಸಣೆಗೆ ಹೋದಾಗ ಅಲ್ಲಿಯ ಮುಖ್ಯ ಉಪಾಧ್ಯಾಯರು ಹಾಗೂ ಅವರ ಜೊತೆಯಲ್ಲಿದ್ದ ಇತರೇ ಉಪಾಧ್ಯಾಯರುಗಳು ಆ ಶಿಕ್ಷಣಾಧಿಕಾರಿಯವರನ್ನು ಬಾಯಿಗೆ ಬಂದಂತೆ ಬೈದು, ಆ ಶಾಲೆಯ ತಪಾಸಣೆಗೆ ಅವಕಾಶವನ್ನು ಕೊಡದೆ, ಶಾಲೆಗೆ ಬೀಗವನ್ನು ಹಾಕಿಕೊಂಡು ಇವರನ್ನು ವಾಪಸು ಕಳುಹಿಸಿ ದ್ದಾರೆ. ಈ ವಿಚಾರವನ್ನು ತಿಳಿದ ಜನರು ಸಂಬಂಧಪಟ್ಟ ಉನ್ನತ ಶಿಕ್ಷಣಾಧಿಕಾರಿಯವರಿಗೆ ತಿಳಿಸಿದ್ದಾರೆ. ನಾನೂ ಕೂಡ ಅವರಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಇದೂ ಅಲ್ಲದೆ ಭಟ್ಕಳ ಮುನಿಸಿಪಾಲಿಟಿ ಯವರೂ ಕೂಡ ಪತ್ರವನ್ನು ಬರೆದಿದ್ದಾರೆ. ಈ ವಿಚಾರ ೩ನೇ ತಾರೀಖಿನ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇಷ್ಟಾದರೂ ಕೂಡ ಆ ಉರ್ದುಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಉಳಿದ ಉಪಾಧ್ಯಾಯರ ವಿರುದ್ಧ ಸರ್ಕಾರದವರು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ತಾವು ಈಗಲಾದರೂ ಕಾನೂನು ಪ್ರಕಾರ ಕ್ರಮವನ್ನು ಕೈಗೊಳ್ಳದಿದ್ದರೆ ನಾಳೆ ಅಲ್ಲಿ ಶಾಂತಿಭಂಗ ಆಗಬಹುದು, ಕಮ್ಯುನಲ್ ಡಿಸ್‌ಪ್ಯೂಟ್ಸ್ ಆಗುತ್ತದೆಂದು ತಿಳಿಸಬಯಸುತ್ತೇನೆ. ಈ ವಿಚಾರದಲ್ಲಿ ಸರ್ಕಾರದ ನಿಲುವು ಏನು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.